# ಭೂತಾನಿನ ಸ್ವರ್ಗ ಚೆಲೇಲಾ ಪಾಸ್



**'ಭೂತಾನಿನ ಸ್ವರ್ಗ' ಎಂದೇ ಬಣ್ಣಿಸಲಾಗುವ 'ಚೆಲೇಲಾ ಪಾಸ್', ಸಾಹಸಿಗರ, ಪ್ರಕೃತಿಪ್ರೇಮಿಗಳ ಮೋಹಕ ತಾಣ.**

■ ಶೇಖರ್ ಗೌಳೇರ್

ಭೂತಾನಿನ ಪ್ರವೇಶದ್ವಾರ ಫ್ಯುಯೆನ್‌ಸೋಲಿಂಗ್‌ಗೆ ಹೊರಟು ನಿಂತಿದ್ದೆವು. ಬೆಳಿಗ್ಗೆ ಹೊರಟಾಗ ಪಾರೋ ನಗರದ ಸುತ್ತಲಿನ ಬೆಟ್ಟಗಳು ಮಂಜಿನಿಂದ ಮುಚ್ಚಿ ಹೋಗಿದ್ದವು. ಭೂತಾನಿನಲ್ಲಿ ಚಳಿಗಾಲ ಆರಂಭವಾಯಿತೇ ಎಂಬ ಅನುಮಾನ ಕಾಡಿತ್ತು. ಪಾರೋ ನಗರದಿಂದ ಕೇವಲ 35 ಕಿ.ಮೀ. ದೂರದ ಜಾಗವೇ 'ಚೆಲೇಲಾ ಪಾಸ್'.

ದಾರಿ ಭಯಾನಕ ತಿರುವುಗಳಿಂದ, ಕಡಿದಾದ ಇಳಿಜಾರುಗಳಿಂದ, ಅಂಕುಡೊಂಕಾದ ಇಕ್ಕಟ್ಟಿನಿಂದ ಕೂಡಿತ್ತು. ಪೈನ್, ಓಕ್, ಜುನಿಫರ್, ಹೆಮ್‌ಲಾಕ್ ಶಂಕುಧಾರಿ ವೃಕ್ಷಗಳು ಹಿಮಹೊದ್ದು ಬೆಳ್ಳಗೆ ಕಂಗೊಳಿಸುತ್ತಿದ್ದವು. ಕುದುರೆ, ಹೇಸರುಗತ್ತೆ, ಯಾಕ್, ಪಶುಗಳು ಅಲ್ಲಲ್ಲಿ ಇಳಿಜಾರಿನ ಅಲ್ಪೈನ್ ಹುಲ್ಲುಗಾವಲುಗಳಲ್ಲಿ ಗುಂಪು ಗುಂಪಾಗಿ ಮೇಯುತ್ತಿದ್ದವು. ರಾತ್ರಿ ಹಿಮಪಾತವಾಗಿದ್ದರಿಂದ ರಸ್ತೆಯ ಇಕ್ಕೆಲಗಳಲ್ಲಿ ಗಿಡ, ಮರ, ಪೊದೆಗಳ ಮೇಲೆ ಮೊಸರು ಚೆಲ್ಲಿದಂತೆ ಕಾಣುತ್ತಿದ್ದವು.

ಹತ್ತು ಗಂಟೆ ವೇಳೆಗೆ ಚೆಲೇಲಾ ಪಾಯಿಂಟ್ ತಲುಪಿದ್ದೆವು. ವಾಹನದಿಂದ ಕೆಳಗಿಳಿಯುತ್ತಲೇ ಅಸಾಧ್ಯ ಚಳಿ, ಶೀತದ ಗಾಳಿಯಿಂದ ದೇಹ ನಡುಗತೊಡಗಿತ್ತು. ಕೈಗಳು ಮರಗಟ್ಟತೊಡಗಿದ್ದವು. ಕೈಗವಸು, ಉಣ್ಣೆ ಟೋಪಿ, ಬೆಚ್ಚನೆಯ ಉಡುಪು ಧರಿಸಿ ಹತ್ತಿರದ ಗೂಡಂಗಡಿಗೆ ತಲುಪಿ, ಅಲ್ಲಿಯ ಅಗ್ಗಿಷ್ಟಿಕೆಯಿಂದ ಬೆಂಕಿ ಕಾಯಿಸಿಕೊಂಡೆವು.

ಪ್ರಾರ್ಥನಾ ಧ್ವಜಗಳು ಬಣ್ಣ ಬಣ್ಣದಲ್ಲಿ ಗಾಳಿಗೆ ಪಟ ಪಟ ಸದ್ದು ಮಾಡುತ್ತಿದ್ದವು. ಪೂರ್ವದ ಪಾರೋ ಪಶ್ಚಿಮದ ಹಾ ಕಣಿವೆ ಒಂದನ್ನೊಂದು ಸಂಧಿಸುವ ತಾಣವೇ ಚೆಲೇಲಾ. ಸಮುದ್ರ ಮಟ್ಟದಿಂದ 3988 ಮೀಟರ್ (13084 ಅಡಿ) ಎತ್ತರದ ಚೆಲೇಲಾ ನಿಜಕ್ಕೂ ಸಾಹಸಿಗರ, ಪ್ರಕೃತಿಪ್ರೇಮಿಗಳ ಸಮ್ಮೋಹಕ ತಾಣ. ಭೂತಾನಿನ ಸ್ವರ್ಗವೆಂದೇ ಅದನ್ನು ಬಣ್ಣಿಸಲಾಗಿದೆ.

ಚೆಲೇಲಾ ಪಾಸ್ ಮೂಲಕವೇ ಪಾರೋ ನಗರದಿಂದ ಹಾ ಪಟ್ಟಣಕ್ಕೆ ಬಾಂಡೇ ರಸ್ತೆ ಆಸ್ಫಾಲ್ಟ್ ಚಾಚಿಕೊಂಡಿದೆ. ಅದು ಭೂತಾನಿನ ಅತಿ ಎತ್ತರದ ಮೋಟಾರೆಬಲ್ ರೋಡ್. ಭಾರತದ ಲಡಾಖಿನ ಖರ್ದುಂಗ್ಲಾ ಪಾಸ್ ಹೇಗೆಯೋ ಹಾಗೆಯೇ ಭೂತಾನಿಗೆ ಚೆಲೇಲಾ ಪಾಸ್. ಚೆಲೇಲಾ ಕಣಿವೆಯಲ್ಲಿ ನಿಂತಾಗ ನಮಗೆಲ್ಲಾ ಸ್ವರ್ಗದ ಅನುಭವ. ಸಂಪದ್ಭರಿತ ಹಚ್ಚ ಹಸಿರ ಕಾಡು, ನೀಲಿ ಆಗಸದಲ್ಲಿ ತೇಲುವ ಬೆಳ್ಳನೆಯ ಮೋಡಗಳು, ಕಣ್ಣು ಹಾಯಿಸುವವರೆಗೆ 360 ಡಿಗ್ರಿ ಸುತ್ತ ಕಾಣುವ ಹಿಮಗಿರಿಗಳ ಸಾಲು ನಮ್ಮನ್ನು ಸಂತಸದ ಕಡಲಲ್ಲಿ ಮುಳುಗಿಸಿದ್ದವು. ಹಿಮಾಲಯದ ಯಾವ ಪ್ರದೇಶದಲ್ಲಿಯೂ ಅಂಥ ದೃಶ್ಯಾವಳಿಗಳನ್ನು ನಾವು ನೋಡಿಯೇ ಇರಲಿಲ್ಲ.

ಚಾರಣಿಗರು ಮಾತ್ರವಲ್ಲದೆ ಬೈಕ್, ಸೈಕಲ್‌ನಲ್ಲಿ ಪರ್ವತಾರೋಹಣ ಮಾಡುವ ಯುವಕರ ಪಡೆಯೇ ಅಲ್ಲಿ ಕಾಣುತ್ತಿತ್ತು. ಮಧುಚಂದ್ರಕ್ಕೆ ಬರುವವರೂ ಕಡಿಮೆ ಇರಲಿಲ್ಲ. ಪಾರೋ ಕಣಿವೆಯನ್ನು ದಾಟಿ ಚೆಲೇಲಾ ಪಾಯಿಂಟ್‌ನಿಂದ ಹಾ ಕಣಿವೆಯತ್ತ ದೃಷ್ಟಿ ಚೆಲ್ಲಿದರೆ ಅದ್ಭುತವಾದ ಹಿಮಗಿರಿಗಳು ಕಾಣುತ್ತಿದ್ದವು. ಹಾ ಕಣಿವೆ ಪ್ರಕೃತಿ ಸೌಂದರ್ಯಕ್ಕೆ ಮಾತ್ರವಲ್ಲ ಅದನ್ನು ಭೂತಾನಿನ ಭತ್ತದ ಕಣಜವೆಂದು ಬಣ್ಣಿಸುತ್ತಾರೆ.

ಚೀನಾ ಗಡಿಗೆ ಹೊಂದಿಕೊಂಡಂಥ ಹಾ ಕಣಿವೆ ಮಿಲಿಟರಿ ಬೇಸ್ ಆಗಿಯೂ ಕೆಲಸ ಮಾಡುತ್ತದೆ. ಚೆಲೇಲಾ ಪಾಸ್‌ನ ಮತ್ತೊಂದು ವಿಶೇಷ 51 ಕಿ.ಮೀ. ದೂರದಲ್ಲಿ ಕಾಣುವ ಝೋಮೊಲ್ಹಾರಿ ಪರ್ವತ. ಇದು ಭೂತಾನಿನ ಅತಿ ಎತ್ತರದ ಪರ್ವತ. ಸದಾ ಹಿಮದಲ್ಲಿ ಮುಚ್ಚಿಹೋಗಿರುತ್ತದೆ. ಇದನ್ನು ಕಾಂಚನಜುಂಗಾ ಪರ್ವತದ ವಧು (bride) ಎಂದು ವರ್ಣಿಸಲಾಗುತ್ತದೆ. ಕಾಂಚನಜುಂಗಾ ಸಮುದ್ರ ಮಟ್ಟದಿಂದ 28169 ಅಡಿ (8586 ಮೀಟರ್) ಎತ್ತರದಲ್ಲಿದ್ದರೆ, ಝೋಮೊಲ್ಹಾರಿ 24840 ಅಡಿ (7570 ಮೀಟರ್) ಎತ್ತರವಿದೆ. ಝೋಮೊಲ್ಹಾರಿ ಭೂತಾನಿಯರ ಅತ್ಯಂತ ಪವಿತ್ರ ದೇವತಾ ಪರ್ವತ.

ಭೂತಾನಿನ ಪಾರೋ ನದಿಗೆ ಝೋಮೊಲ್ಹಾರಿ ಪರ್ವತಗಳೇ ನೀರಿನ ಆಕರಗಳು. ಚೆಲೇಲಾ ಪಾಸ್ ಛಾಯಾಗ್ರಾಹಕರಿಗಂತೂ ಸ್ವರ್ಗಸಮಾನ. ಇಂಥ ಸ್ಥಳದಲ್ಲಿ ನಾವು ಒಂದೆರಡು ಗಂಟೆ ಕಳೆದದ್ದು ಸ್ಮೃತಿಪಟಲದಲ್ಲಿ ಚಿತ್ರಪಟ ಕಥನವಾಯಿತು.

ಪ್ರತಿಕ್ರಿಯಿಸಿ: feedback@sudha.co.in